**O.S. 369-19 PW : 2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 25.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ L V M, ವಕೀಲರಿಂದಃ**

2. ದಿಃ 6.4.2017 ರಂದು ಆದ ಬಕ್ಷಿಸ ಪತ್ರವನ್ನು ನಿಪಿ.10 ಕ್ಕೆ ನಾನು ಸಹಿ ಮಾಡಿದ್ದೇನೆ. ನನ್ನನ್ನು ಸಹಿ ಮಾಡಲು ಸಿದ್ದಾರ್ಥ ಹಾಗೂ ಸೋಮಪ್ಪ ಇಟಗಿ ರವರು ಕರೆದಿದ್ದರು. ನಾನು ಆಟೋ ಚಾಲಕ. ಸೋಮಪ್ಪ ಇಟಗಿ ರವರು ಆಟೋ ಭಾಡಿಗೆಗೆ ಕರೆದಿದ್ದರು. ಉಪ-ನೋಂದಣಿ ಕಚೇರಿಗೆ ಭಾಡಿಗೆಗೆ ಕರೆದಿದ್ದರು. ಯಾವ ಪತ್ರವನ್ನು ನೋಂದಣಿ ಮಾಡಲು ಹೋಗಬೇಕೆಂದು ಹೇಳಿರಲಿಲ್ಲ. ಹೊಲದ ಬಕ್ಷಿಸ ಪತ್ರ ಮಾಡುವುದು ಇದೆ, ಹೋಗೋಣವೆಂದು ಹೇಳಿದ್ದರು ಅಂದರೆ ಸರಿ. ನವಲಗುಂದ ಹುಬ್ಬಳ್ಳಿಯಿಂದ 40 ಕಿಮೀ ದೂರವಿದೆ. ಆಟೋದಲ್ಲಿ ಸಿದ್ಧಾರ್ಥ ಹಾಗೂ ಸೋಮಪ್ಪ ಇಟಗಿ ಮತ್ತು ತೋಟದ ರವರು ಬಂದಿದ್ದರು. ಸಿದ್ದಾರ್ಥ ರವರು ಬಹಳ ವರ್ಷಗಳಿಂದ ಪರಿಚಯ. ಸಿದ್ದಾರ್ಥ ರವರ ತಂಗಿಯರು ಪರಿಚಯ. ನಮ್ಮ ಮನೆ ಹಾಗೂ ಸಿದ್ದಾರ್ಥ ಹಾಗೂ ಅವರ ಅಕ್ಕಂದಿರ ಮನೆ ನಮ್ಮ ಓಣಿಯಲ್ಲಿವೆ ಅಂದರೆ ಸರಿ. ಅವರ ಮನೆ ವ್ಯವಹಾರ ಸ್ವಲ್ಪ ಗೊತ್ತು. ಭಾಡಿಗೆಗೆ ಹೋಗುತ್ತಿದ್ದೆನು. ಬಕ್ಷಿಸ ಪತ್ರ ಮಾಡುವಾಗ ಸೋಮಪ್ಪ ಇಟಗಿ ರವರು ಆಟೋ ಬಂದು ಹತ್ತಿದರು. ಅವರು ಆರೋಗ್ಯವಾಗಿದ್ದರು. ಸೋಮಪ್ಪ ಇಟಗಿ ರವರು ಸಿದ್ದಾರ್ಥ ಹಾಗೂ ಆತನ ಮಕ್ಕಳ ಮೇಲೆ ಪ್ರೀತಿ ಇತ್ತು. ನನ್ನ ವಿದ್ಯಾಭ್ಯಾಸ 9 ನೇ ತರಗತಿವರೆಗೆ ಆಗಿದೆ. ನನಗೆ ಕನ್ನಡ ಓದಲು - ಬರೆಯಲು ಬರುತ್ತದೆ. ಇಂಗ್ಲೀಷ ಓದುತ್ತೇನೆ, ಆದರೆ ಅರ್ಥವಾಗುವುದಿಲ್ಲ. ನಾನು ಇಂಗ್ಲೀಷದಲ್ಲಿ ಸಹಿ ಮಾಡುತ್ತೇನೆ. ನಿಪಿ.10 ಬಕ್ಷಿಸ ಪತ್ರ ಪುಟ ನಂಃ 4 ರಲ್ಲಿ ನಾನು ಸಹಿ ಮಾಡಿದ ಮೇಲ್ಗಡಗೆ ಬಕ್ಷಿಸ ಪತ್ರ ಪಡೆದವರ ಸಹಿ ಇದೆ ಎಂದು ಬರೆದಿದೆ. ಬಕ್ಷಿಸ ಪತ್ರ ಬರೆದುಕೊಟ್ಟವರ ಸಹಿ ಅಂತಾ ಇದೆ. ಅದರ ಕೆಳಗಡೆ ಸಹಿ ಮಾಡಿದೆ. ಬಕ್ಷಿಸ ಪತ್ರಕ್ಕೆ ನನ್ನ ಸಹಿ ತೆಗೆದುಕೊಳ್ಳುತ್ತಾರೆ ನನಗೆ ಗೊತ್ತಿತ್ತು ಅಂದರೆ ಗೊತ್ತಿಲ್ಲ. ಸಿದ್ದಾರ್ಥ ನ ಅಕ್ಕಳಿಗೆ ಅನುಕೂಲ ಮಾಡಿಕೊಡಲು ನಾನು ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ. ಅದನ್ನು ಓದಿ ಸಹಿ ಮಾಡಿದ್ದೇನೆ. ಮುಖ್ಯ ವಿಚಾರಣೆಯ ಪ್ಯಾರಾ ನಂಃ 2 ನನಗೆ ಅರ್ಥ ಆಗಿಲ್ಲ..

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.